ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ

**ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಕೆ.ಆರ್.ವೃತ್ತ, ಬೆಂಗಳೂರು -1**

ಸಂಖ್ಯೆ ಸಿ8(1)ಶಾಶಿಅ ಶಾಶಿಅ ಸುತ್ತೋಲೆ 141/2018-19 ದಿನಾಂಕ:13-03-2019

**ಸುತ್ತೋಲೆ**

**ವಿಷಯ:-** ಖಾಸಗಿ ಅನುದಾನಿತ ಪ್ರೌಢ ಶಾಲೆಗಳಲ್ಲಿ ನಿವೃತ್ತಿ , ರಾಜೀನಾಮೆ, ಮರಣ, ಸೂಕ್ತ ಪ್ರಾಧಿಕಾರದ ಅನುಮೋದನೆ ಪಡೆದು ಬಡ್ತಿ ಹೊಂದಿರುವ ಹಾಗೂ ಇತರೆ ಕಾರಣಗಳಿಂದ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಅನುಮತಿ ನೀಡುವ ಬಗ್ಗೆ

**ಉಲ್ಲೇಖ:-**1. ಸರ್ಕಾರದ ಆದೇಶ ಸಂಖ್ಯೆ ಇಡಿ 14 ಎಸ್.ಇ.ಪಿ 2017 ದಿನಾಂಕ:06-03-2019

2. ಈ ಕಚೇರಿ ಸುತ್ತೋಲೆ ದಿನಾಂಕ:18-12-2018, 18-02-2019 ಮತ್ತು 13-02-2019 ರ ವಿಡಿಯೋ ಕಾನ್ಪರೆನ್ಸ್

*****

ಉಲ್ಲೇಖಿತ (1) ರ ಸರ್ಕಾರದ ಆದೇಶದಲ್ಲಿ ಖಾಸಗಿ ಅನುದಾನಿತ ಪ್ರೌಢ ಶಾಲೆಗಳಲ್ಲಿ ನಿವೃತ್ತಿ, ರಾಜೀನಾಮೆ, ಮರಣ, ಸೂಕ್ತ ಪ್ರಾಧಿಕಾರದ ಅನುಮೋದನೆ ಪಡೆದು ಬಡ್ತಿ ಹೊಂದಿರುವ ಹಾಗೂ ಇತರೆ ಕಾರಣಗಳಿಂದ ಖಾಲಿ ಇರುವ ಬೋಧಕ ಹುದ್ದೆಗಳನ್ನು ಭರ್ತಿ ಮಾಡಲು ವಿಧಿಸಲಾದ ಶಾಲೆಯ 5 ವರ್ಷಗಳ ಎಸ್.ಎಸ್.ಎಲ್.ಸಿ ಫಲಿತಾಂಶವು ಜಿಲ್ಲಾ ಸರಾಸರಿಗಿಂತ ಹೆಚ್ಚು ಅಥವಾ ಸಮನಾಗಿರಬೇಕೆಂಬ ಷರತ್ತನ್ನು ಸಡಿಲಿಸಿ ಆದೇಶಿಸಲಾಗಿದೆ.

ಷರತ್ತನ್ನು ಸಡಿಲಗೊಳಿಸಿರುವುದರಿಂದ ತಮ್ಮ ಹಂತದಲ್ಲಿರುವ ಪ್ರಸ್ತಾವನೆಗಳನ್ನು ಈಗಾಗಲೇ ಉಲ್ಲೇಖಿತ (2)ರ ಸುತ್ತೋಲೆಯಲ್ಲಿ ಸ್ಪಷ್ಟಪಡಿಸಿರುವಂತೆ **ಎಲ್ಲಾ ಪ್ರಸ್ತಾವನೆಗಳನ್ನು ನಿಯಮಾನುಸಾರ ಆನ್-ಲೈನ್** ಮುಖಾಂತರವೇ ಸಲ್ಲಿಸಲು ಕ್ರಮ ವಹಿಸಲು ಸೂಚಿಸಲಾಗಿದೆ. ಆದರೆ ಅಂತಿಮ ಆದೇಶಗಳನ್ನು ಚುನಾವಣೆಯ ಮಾದರಿ ನೀತಿ ಸಂಹಿತೆ ಮುಗಿದನಂತರ ಮಾತ್ರ ಹೊರಡಿಸಲಾಗುವುದು.

**(ಕರಡು ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)**

13/3

**ನಿರ್ದೇಶಕರು(ಪ್ರೌಢ ಶಿಕ್ಷಣ)**

**ಇವರಿಗೆ,**

1. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಮತ್ತು ಕಲಬುರಗಿ
2. ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ) ಇವರಿಗೆ ಸೂಕ್ತ ಕ್ರಮಕ್ಕಾಗಿ
3. ಕಚೇರಿ ಪ್ರತಿ